# 2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ
# ಕ್ರಿಮಿನಲ್ ಪ್ರಕರಣ ಸಂಖ್ಯೆ : 6681/2021

ಪಿರ್ಯಾದುದಾರರು - ತಾವರೆಕೆರೆ ಪೋಲಿಸ್ ಠಾಣೆ

**ವಿರುದ್ಧ**

ಆರೋಪಿಗಳು - 1. ಶ್ರೀ. ಶಿವಾನಂದ ಬಿನ್ ಬಸಣ್ಣ
ಬಿನ್ ಲೇಟ್ ಕಾಟಯ್ಯ,
ವಯಸ್ಸು 80 ವರ್ಷ,

2. ಶ್ರೀ. ಶಿವಕುಮಾರ್ ಬಿನ್ ರಾಜಣ್ಣ,
ವಯಸ್ಸು 54 ವರ್ಷ,

3. ಶ್ರೀಮತಿ. ಹೊನ್ನಮ್ಮ ಕೋಂ. ಜಯದೇವ

ಎಲ್ಲರ ವಾಸಃ ಪೆಮ್ಮನಹಳ್ಳಿ ಗ್ರಾಮ,
ಸೋಲೂರು ಹೋಬಳಿ,
ಮಾಗಡಿ ತಾಲ್ಲೂಕು,

## <u>ದೋಷಾರೋಪಣೆ</u>

(ಶ್ರೀಮತಿ. ರಂಜಿತ ಜಿ ಬಿ, ಬಿ.ಬಿ.ಎ., ಎಲ್.ಎಲ್.ಬಿ 2 ನೇ ಅಪರ ನ್ಯಾಯಿಕ ದಂಡಾಧಿಕಾರಿ, ಮಾಗಡಿ ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮ ಮೇಲೆ ಹೊರೆಸುವ ಆರೋಪಣೆ)

1. ಶಿವಾನಂದ
2.ಶಿವಕುಮಾರ್
3. ಹೊನ್ನಮ್ಮ ಆದ ನೀವುಗಳು

ದಿನಾಂಕ 10-10-2021 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ತಾವರೆಕೆರೆ ಪೋಲೀಸ್ ಠಾಣೆಯ ಸರಹದ್ದು, ಮಾಗಡಿ ತಾಲ್ಲೂಕು, ಸೋಲೂರು ಹೋಬಳಿ, ಪೆಮ್ಮನಹಳ್ಳಿ ಗ್ರಾಮದಲ್ಲಿ ಇರುವ ಚಾಸಾ-1 ಮತ್ತು 2 ರವರಿಗೆ ಸೇರಿದ ಸರ್ವೆ ನಂ.38/1 ಮತ್ತು 43/2 ರ ಜಮೀನಿಗೆ ಸಮಾನ ಉದ್ದೇಶದಿಂದ ನೀವುಗಳು

ಗುಂಪು ಕಟ್ಟಿಕೊಂಡು ಅತಿಕ್ರಮ ಪ್ರವೇಶ ಮಾಡಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿಂತೆ ಕಲಂ-447 ಸಹವಾಚಕ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಎರಡನೆಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಅದೇ ಸಮಯದಲ್ಲಿ ಸಮಾನ ಉದ್ದೇಶದಿಂದ ನೀವುಗಳು ಚಾಸಾ-1 ಮತ್ತು 2 ರವರಿಗೆ ಸೇರಿದ ಜಮೀನಿನಲ್ಲಿ ಹಾಕಿದ್ದ ಸುಮಾರು 75 ತೇಗದ ಮರಗಳನ್ನು ಕಡಿದು ಹಾಕಿದ್ದು ಅವರಿಗೆ ಸುಮಾರು 2 ಲಕ್ಷಕ್ಕೂ ಅದಿಕ ನಷ್ಟವುಂಟು ಮಾಡಿದ್ದು ಮತ್ತು ಅದರಲ್ಲಿ ಸುಮಾರು 15 ಅಡಿ ಅಗಲದ ಮಣ್ಣಿನ ರಸ್ತೆ ಮಾಡಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿಂತೆ ಕಲಂ-427 ಸಹವಾಚಕ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಕೊನೆಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಅದೇ ಸಮಯದಲ್ಲಿ ಸಮಾನ ಉದ್ದೇಶದಿಂದ ನೀವುಗಳು ಚಾಸಾ-1 ಮತ್ತು 2 ರವರಿಗೆ ಕೈಗಳಿಂದ ಹೊಡೆದು ನೋವುಂಟು ಮಾಡಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿಂತೆ ಕಲಂ-323 ಸಹವಾಚಕ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಪ್ರಶ್ನೆ-1 ಃ ನಿಮ್ಮ ಮೇಲಿನ ಆಪಾದನೆಯ ಸಾರವನ್ನು ಓದಿ, ವಿವರಿಸಿ ಹೇಳಿದಾಗ ನಿಮಗೆ ಅರ್ಥವಾಯಿತೆ?

**1 ನೇ ಆರೋಪಿಯವರ ಉತ್ತರ -**
**2 ನೇ ಆರೋಪಿಯವರ ಉತ್ತರ -**
**3 ನೇ ಆರೋಪಿಯವರ ಉತ್ತರ -**

ಪ್ರಶ್ನೆ-2 ಃ ನೀವು ನಿಮ್ಮ ತಪ್ಪನ್ನು ಒಪ್ಪುಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಇಚ್ಚಿಸುವಿರೋ ?

**1 ನೇ ಆರೋಪಿಯವರ ಉತ್ತರ -**
**2 ನೇ ಆರೋಪಿಯವರ ಉತ್ತರ -**
**3 ನೇ ಆರೋಪಿಯವರ ಉತ್ತರ -**

**ಈ ಮೇಲ್ಕಂಡ ಆಪಾದನೆಗಳನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುವುದಾಗಿ ಈ ಮೂಲಕ ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿರುವುದಾಗಿ ಈ ಮೂಲಕ ನಿರ್ದೇಶಿಸುತ್ತೇನೆ.**

**(ಮೇಲ್ಕಂಡ ಆರೋಪಿತನ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ ಸರಿ ಇದೆಯೆಂದು ನನ್ನ ಸಮಕ್ಷಮ ದಿನಾಂಕ 27-03-2024 ರಂದು ಸಹಿಯನ್ನು ಮಾಡಿರುತ್ತೇನೆ.)**

( ಶ್ರೀಮತಿ. ರಂಜಿತ ಜಿ.ಬಿ)
2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು
ಜೆ.ಎಂ.ಎಫ್?ಸಿ ನ್ಯಾಯಾಲಯ, ಮಾಗಡಿ.

ಆರೋಪಿಗಳ ಸಹಿಃ